ದಿನಾಂಕಃ 30-11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವೈ ಎಂ ಆರ್ ವಕೀಲರಿಂದ**

2 ಮತ್ತು 3 ನೇ ವಾದಿಗಳಿಗೆ ವಿವಾಹವಾಗಿ 30 ವರ್ಷ ಮೇಲಾಗಿದೆ ಎಂದರೆ ಸರಿ. ವಿವಾಹದ ತರುವಾಯ ಅವರು ಅವರವರ ಗಂಡನ ಮನೆಯಲ್ಲಿದ್ದಾರೆ ಎಂದರೆ ಸರಿ. 2 ಮತ್ತು 3 ನೇ ವಾದಿಗಳ ವಿವಾಹದ ನಂತರ ನನ್ನ ಗಂಡ ದಾವಾ ಬಿ ಆಸ್ತಿಯನ್ನು 1991ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಸಮಯಕ್ಕೆ ನನ್ನ ಗಂಡನಿಗೆ ಅದಾಯ ಬರುವಂತಹ ಯಾವುದೇ ಮೂಲಗಳು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಭತ್ತ ತೂಕ ಮಾಡುವ ಕೂಲಿ ಕೆಲಸಕ್ಕೆ ಹೋಗುತ್ತಿದ್ದರು. ನನ್ನ ಗಂಡ ಕೂಲಿ ಮಾಡುತ್ತಿದ್ದರಿಂದ ಅವರಿಗೆ ಬರುತ್ತಿದ್ದ ಅದಾಯದಲ್ಲಿ ನಮ್ಮ ಮನೆಯನ್ನು ನಡೆಸುವುದೇ ಕಷ್ಟವಿತ್ತು ಎಂದರೆ ಸರಿ. 1991ರಲ್ಲಿ ನನ್ನ ಗಂಡನಿಗೆ ದುಡಿಯುವ ಶಕ್ತಿ ಇರಲಿಲ್ಲ ಎಂದರೆ ಸಾಕ್ಷಿ ನಮಗೆ 30 ಗುಂಟೆ ಜಮೀನು ಇದ್ದು ಅದರ ಮೂಲಕ ಜೀವನ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ನಮಗೆ ಇದ್ದ 1 ಎಕರೆ 10 ಗುಂಟೆ ಜಮೀನಿನಲ್ಲಿ ಅರ್ಧ ಎಕರೆ ಜಮೀನನ್ನು ಮಾರಾಟ ಮಾಡಿ 2 ಮತ್ತು 3 ನೇ ವಾದಿಗಳ ವಿವಾಹವನ್ನು ಮಾಡಿರುತ್ತೇನೆ. ಸದರಿ ಆಸ್ತಿಯನ್ನು ಮಾರಾಟ ಮಾಡಿದ ತರುವಾಯ ನಮ್ಮ ಕುಟುಂಬಕ್ಕೆ ಸೇರಿದ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು 30 ಗುಂಟೆ ಜಮೀನು ಇತ್ತು ಎಂದು ನುಡಿಯುತ್ತಾರೆ.

ಸದರಿ ಜಮೀನಿನ ವಿವರ ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ನನ್ನ ದಾವೆಯಲ್ಲಿ ನಮೂದಿಸಿಲ್ಲ ಎಂದರೆ ಸರಿ. 1ನೇ ಪ್ರತಿವಾದಿಯೇ ದುಡಿದು ಸ್ವಂತ ದುಡ್ಡಿನಿಂದ ದಾವಾಸ್ತಿಯನ್ನು ಖರೀದಿಸಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಬಿ ಷೆಡ್ಯೂಲ್ ಆಸ್ತಿಯನ್ನು ನನ್ನ ಗಂಡ ಖರೀದಿಸುವ ಮುನ್ನ ಸದರಿ ಆಸ್ತಿ ನನ್ನ ಚಿಕ್ಕಪ್ಪನಾದ ಪ್ಯಾರೇಜಾನ್ ರವರ ಹೆಸರಿನಲ್ಲಿರುತ್ತದೆ. ಸದರಿ ಪ್ಯಾರೇಜಾನ್ ಮೃತಪಟ್ಟಿರುತ್ತಾರೆ. ಅವರ ಮಕ್ಕಳು ಜೀವಂತವಿದ್ದಾರೆ, ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಸಾಕ್ಷ್ಯ ನುಡಿಸಲು ನನಗೇನು ತೊಂದರೆಯಿಲ್ಲ ಎಂದರೆ ಸರಿಯಲ್ಲ.

ದಾವಾಸ್ತಿ ನನ್ನ ಚಿಕ್ಕಪ್ಪನಿಗೆ ಸೇರಿದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ದಾವಾಸ್ತಿ ಮೂಲತಃ ಪಿ ಮಹಮ್ಮದ್ ದಸ್ತಗೀರ್ ಸಾಬ್ ರವರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ಪ್ಯಾರೇಜಾನ್ ನ ಇನ್ನೊಂದು ಹೆಸರೇ ಮಹಮ್ಮದ್ ದಸ್ತಗೀರ್ ಸಾಬ್ ಎಂದು ನುಡಿಯುತ್ತಾರೆ, ಸದರಿ ಮಹಮ್ಮದ್ ದಸ್ತಗೀರ್ ಸಾಬ್ ರವರ ತಂದೆಯ ಹೆಸರು ಖಾಸಿಂ ಸಾಬ್ ಆಗಿದೆ. ಸದರಿ ಜಮೀನಿನ ಕ್ರಯ ವ್ಯವಹಾದ

ಮಾಹಿತಿ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿನ ವ್ಯವಹಾರದ ಮಾತುಕತೆಗೆ ನಾನು ಹೊಗಿರುವುದಿಲ್ಲ. ಹಾಗಾಗಿ ಸದರಿ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸದರಿ ದಾವಾಸ್ತಿಯನ್ನು ನನ್ನ ಗಂಡ ರೂ.35,000/-ಗಳಿಗೆ ಖರೀದಿ ಮಾಡಿರುತ್ತಾರೆ. ಸದರಿ ಪತ್ರಕ್ಕೆ ಯಾರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ವ್ಯವಹಾರಕ್ಕೆ ನಾನು ಖುದ್ದಾಗಿ ಹಾಜರಿರದ ಕಾರಣ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಕ್ರಯದ ಹಣವನ್ನು ಯಾರು, ಯಾರಿಗೆ, ಎಷ್ಟು ಕೊಟ್ಟರು ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸಾಕ್ಷಿ ನನ್ನ ಸಣ್ಣಪ್ಪನಾದ ಪ್ಯಾರೇಜಾನ್ ರವರಿಗೆ ನಾನೇ ರೂ.35,000/-ಗಳನ್ನು ಕೊಟ್ಟಿರುತ್ತೇನೆ. ಸದರಿ ರೂ.35,000/-ಗಳನ್ನು ಯಾವಾಗ ಕೊಟ್ಟೆ ಎಂದು ನನಗೆ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ನಾನು ನನ್ನ ಸಣ್ಣಪ್ಪನಿಗೆ ಹಣವನ್ನು ಕೊಡುವ ಸಮಯಕ್ಕೆ ಕರಿಂ ಖಾನ್ ಸಾಬ್ , ನಜೀರ್ ಸಾಬ್ ಮತ್ತು ಸಣ್ಣಪ್ಪ ಹಾಜರಿದ್ದರು. ಸದರಿ ಹೆಸರಿನವರು ಯಾರು ಸಹ ಸದರಿ ಸಮಯದಲ್ಲಿ ಹಾಜರಿರಲಿಲ್ಲ ಮತ್ತು ಸದರಿ ಕ್ರಯಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿಯವರೇ ಸದರಿ ಕ್ರಯಪತ್ರಕ್ಕೆ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ಸಹಿ ಹಾಕಿರುತ್ತಾರೆ.

ಈಶ್ವರನಾಯ್ಕ ಬಿನ್ ಹಾಲನಾಯ್ಕ ಯಾರು ಎಂದು ನನಗೆ ಗೊತ್ತಿಲ್ಲ. ಆದರೆ ಸದರಿಯರು ತಾಂಡದವರು. ನಾನು ಈ ಮೇಲೆ ಹೇಳಿದ ಜನರು ಯಾರು ಕ್ರಯಪತ್ರಕ್ಕೆ ಸಹಿ ಹಾಕಿಲ್ಲ ಎಂದರೆ ಸರಿ. ನಾನು ದಾವಾಸ್ತಿಯನ್ನು ಖರೀದಿಸಲು ರೂ.35,000/-ಗಳನ್ನು ಕೊಟ್ಟೆ ಎಂದು ಸುಳ್ಳು ಹೇಳುತ್ತಿದ್ದು ಆದರೆ ಸದರಿ ದಾವಾಸ್ತಿಯನ್ನು ಕೊಳ್ಳಲು ರೂ.14,000/- ಮಾತ್ರ ಕ್ರಯ ವ್ಯವಹಾರವಾಗಿದೆ ಎಂದರೆ ಸರಿಯಲ್ಲ.ಸದರಿ ರೂ,14,000/-ಗಳನ್ನು 1 ನೇ ಪ್ರತಿವಾದಿಯೇ ದಾವಾಸ್ತಿಯ ಮೂಲ ಮಾಲೀಕರಿಗೆ ಕೊಟ್ಟು ಖರೀದಿಸಿರುತ್ತಾನೆ ಎಂದರೆ ಸರಿಯಲ್ಲ. ಪಿ ಮಹಮ್ಮದ್ ದಸ್ತಗೀರ್ ಸಾಬ್ ರವರ ಮಕ್ಕಳು ಈಗಲೂ ಜೀವಂತವಿದ್ದು, ಅವರಿಗೆ ಸದರಿ ವ್ಯವಹಾರ ತಿಳಿದಿದೆ ಎಂದರೆ ಸರಿಯಲ್ಲ. ನಾನು ದಾವಾಸ್ತಿಯನ್ನು ರೂ.35,000/-ಗಳಿಗೆ ಖರೀದಿ ಮಾಡಿದ ಬಗ್ಗೆ ನನ್ನ ಬಳಿ ಪತ್ರ ಇದೆಯೇ ಎಂದರೆ ಸಾಕ್ಷಿ ನಮ್ಮ ಮನೆಗೆ ನುಗ್ಗಿ 1ನೇ ಪ್ರತಿವಾದಿಯಾದ ಆಯೂಬ್ ಖಾನ್ ರವರು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ. ಸದರಿ ವಿಚಾರವನ್ನು ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ. 1ನೇ ಪ್ರತಿವಾದಿ ಮನೆ ಬಿಟ್ಟು ಹೋಗಿ 30 ರಿಂದ 40 ವರ್ಷವಾಗಿದೆ. ಸದರಿ ವಿಚಾರವನ್ನು ಸಹ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಸದರಿ ಕಳ್ಳತನವನ್ನು 1ನೇ ಪ್ರತಿವಾದಿ 35 ವರ್ಷಗಳ ಹಿಂದೆ ಮಾಡಿರುತ್ತೇನೆ. ಸದರಿ ಕಳ್ಳತನದ ಕುರಿತು ನಾನು ಠಾಣೆಯಲ್ಲಿ ಯಾವುದೇ ದೂರನ್ನು ದಾಖಲಿಸಿಲ್ಲ. ಮಸೀದಿಗೆ ಹೋಗಿ ಹೇಳಿರುತ್ತೇನೆ. ನನ್ನ

ಜಮೀನನ್ನು 1 ನೇ ಪ್ರತಿವಾದಿ ಮಾರಿಕೊಂಡ ವಿಚಾರ ನನಗೆ 2 ವರ್ಷಗಳ ಹಿಂದೆ ತಿಳಿದಿದ್ದು ಆಗ ನಾನು ಮಸೀದಿಗೆ ಹೋಗಿ ಹೋಳಿರುತ್ತೇನೆ. ಸದರಿ ದಾವಾಸ್ತಿಯ ಚೆಕ್ಕುಬಂದಿ ನನಗೆ ಹೇಳಲಾಗುವುದಿಲ್ಲ. ಆಗಿದ್ದರೆ ದಾವಾಸ್ತಿಗೆ ಚೆಕ್ಕುಬಂದಿಗಳನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮಸೀದಿಗೆ ನಾನೇ ಹೋಗಿ 1 ನೇ ಪ್ರತಿವಾದಿಯ ವಿರುದ್ದ ದೂರನ್ನು ಲಿಖಿತವಾಗಿ ನೀಡಿರುತ್ತೇನೆ. ಸದರಿ ಅರ್ಜಿಯ ಪ್ರತಿಯನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಸದರಿ ದಾವಾಸ್ತಿಯನ್ನು 1 ನೇ ಪ್ರತಿವಾದಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯ ಬೆಲೆ ಈಗ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ದಾವಾಸ್ತಿಯನ್ನು 1 ನೇ ಪ್ರತಿವಾದಿಯಿಂದ ಶ್ರೀಮತಿ ಸಬ್ರೀನ್ ತಾಜ್/ 3 ನೇ ಪ್ರತಿವಾದಿ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ದಾವಾಸ್ತಿಯನ್ನು 13 ಲಕ್ಷದ 88 ಸಾವಿರ ರೂ.ಗಳಿಗೆ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದ ನಂತರ 3 ನೇ ಪ್ರತಿವಾದಿಯ ಹೆಸರಿಗೆ ಖಾತೆ ಮತ್ತು ಪಹಣಿ ವರ್ಗಾವಣೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಕಳೆದ 30 ವರ್ಷಗಳಿಂದ 2 ಮತ್ತು 3 ನೇ ವಾದಿಗಳ ಮನೆಯಲ್ಲಿ ವಾಸವಾಗಿದ್ದೆನೆ. ನಾನು 1ನೇ ಪ್ರತಿವಾದಿಯ ಮನೆಯಲ್ಲಿ ಎಂದಿಗೂ ವಾಸವಾಗಿಲ್ಲ ಎಂದರೆ ಸರಿ. ಹಾಗಾಗಿ ನನ್ನ ಹಾಗೂ 1ನೇ ಪ್ರತಿವಾದಿಯ ನಡುವೆ ಯಾವುದೇ ಸೌಹಾರ್ದ ಸಂಬಂಧವಾಗಲಿ ಅಥವಾ ಸಂಪರ್ಕವಾಗಿ ಇಲ್ಲ ಎಂದರೆ ಸರಿ. ಹಾಗಾಗಿ 1 ನೇ ಪ್ರತಿವಾದಿ ಮಾಡಿದ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ.

ಈ ದಾವೆ ಹೂಡಲು ದಾಖಲೆಗಳನ್ನು ಯಾರು ತಂದುಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಗಳ ವಿವರ ನನಗೆ ಗೊತ್ತಿಲ್ಲ. ಸದರಿ ದಾಖಲೆಗಳನ್ನು ನನ್ನ ಸಣ್ಣಪ್ಪನ ಮಗ ತಂದುಕೊಟ್ಟಿರುತ್ತಾನೆ. ಅವನ ಹೆಸರನ್ನು ನನಗೆ ಹೇಳಲಾಗುವುದಿಲ್ಲ. ಸದರಿ ನಿಪಿ-1 ರಿಂದ 12 ರ ದಾಖಲೆಗಳನ್ನು ನಾನು ಮಸೀದಿಯಿಂದ 2 ವರ್ಷಗಳ ಹಿಂದೆ ತೆಗೆದುಕೊಂಡು ಬಂದಿರುತ್ತೆನೆ. ಸದರಿ ದಾಖಲೆಗಳು ಏನು ಎಂದು ನನಗೆ ಹೇಳಲಾಗುವುದಿಲ್ಲ. ತನ್ವೀರ್ ಮುಸ್ತಾದ್ ಖಾನ್ ಬಿನ್ ಆಯಾಬ್ ಖಾನ್ ಯಾರು ಎಂದು ನನಗೆ ಗೊತ್ತಿಲ್ಲ. ನಿಪಿ-10 ಮತ್ತು 11 ರ ದಾಖಲೆಯನ್ನು ಯಾರು, ಯಾವಾಗ, ಯಾವ ದಾಖಲೆ ತಂದುಕೊಟ್ಟರು ಎಂದು ನನಗೆ ಗೊತ್ತಿಲ್ಲ. ಸದರಿ ನಿಪಿ-11 ನ್ನು ಯಾರು,ಯಾರಿಗೆ,ಯಾವಾಗ ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾಸ್ತಿಯ ಕುರಿತು ನಿಪಿ-10, 11 ರ ತರುವಾಯ ಸದರಿಯವರ ಹೆಸರಿಗೆ ಕಂದಾಯ ಇಲಾಖೆಯಲ್ಲಿ ಕಂದಾಯ

ದಾಖಲೆಗಳು ವರ್ಗಾವಣೆಯಾದ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ಸದರಿಯವರ ಹೆಸರಿಗೆ ಖಾತೆ ಮತ್ತು ಪಹಣಿ ಬದಲಾವಣೆಯಾದ ಕುರಿತು ನಾನು ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿ.

ನಾನು 30 ವರ್ಷಗಳಿಂದ ನನ್ನ ಹೆಣ್ಣುಮಕ್ಕಳೊಂದಿಗೆ ವಾಸವಿದ್ದ ಕಾರಣ ದಾವಾಸ್ತಿಯ ಮೇಲೆ ಯಾವುದೇ ಕಂದಾಯವನ್ನು ಕಟ್ಟಿಲ್ಲ ಎಂದರೆ ಸರಿ. ನಾನು ನನ್ನ ಹೆಣ್ಣುಮಕ್ಕಳೊಂದಿಗೆ ಇಂದಿನವರೆಗೂ ಚೆನ್ನಾಗಿ ವಾಸವಾಗಿದ್ದೆನೆ ಎಂದರೆ ಸರಿ. ಈ ದಾವೆಗಾಗಿ ನನ್ನನ್ನು 2 ಮತ್ತು 3 ನೇ ವಾದಿಗಳೇ ನ್ಯಾಯಾಲಯಕ್ಕೆ ಕರೆದುಕೊಂಡು ಬರುವುದು ಕರೆದುಕೊಂಡು ಹೋಗುವುದು ಮಾಡುತ್ತಾರೆ ಎಂದರೆ ಸರಿ. ಹಾಗಾಗಿ ಸದರಿ 2 ಮತ್ತು 3 ನೇ ವಾದಿಗಳ ಚಿತಾವಣೆ ಮೇರೆಗೆ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಹಾಗಾಗಿ ನನಗೆ ಈ ದಾವೆಯ ವಿದ್ಯಾಮಾನಗಳ ಬಗ್ಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿ. ಹಾಗಾಗಿ ನಾನು 30 ವರ್ಷಗಳಿಂದ 1ನೇ ಪ್ರತಿವಾದಿಯೊಂದಿಗೆ ಯಾವುದೇ ಸಂಪರ್ಕ ಹೊಂದಿಲ್ಲದ ಕಾರಣ ಮತ್ತು ನನಗೆ ದಾವಾಸ್ತಿಯ ಕುರಿತು ಯಾವುದೇ ಮಾಹಿತಿ ಇಲ್ಲದೆ ಇದ್ದರು ಸಹ 2 ಮತ್ತು 3 ನೇ ವಾದಿಗಳ ಮಾತನ್ನು ಕೇಳಿ ಪ್ರತಿವಾದಿಗಳಿಗೆ ತೊಂದರೆಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ದಾವಾಸ್ತಿಯನ್ನು ಖರೀದಿಸಿದ ಬಗ್ಗೆ ಮೂಲಕ್ರಯಪತ್ರವನ್ನು ನನ್ನ ಬಳಿಯಿಂದ ಕಳ್ಳತನ ಮಾಡಿರುತ್ತಾರೆ. ಮೂಲ ಕ್ರಯಪತ್ರ ಕಳುವಾದ ಬಗ್ಗೆ ನಾನು ಯಾವುದೇ ದೂರನ್ನಾಗಲಿ ಅಥ ಪತ್ರಿಕಾ ಪ್ರಕಟಣೆಯನ್ನಾಗಲಿ ತೆಗೆದುಕೊಂಡಿಲ್ಲ. ಹಾಗಾಗಿ ದಾವಾಸ್ತಿಯ ಕುರಿತು ವಾದಿಗಳ ಮುಖಾಂತರ ನಿಪಿ-1 ರಿಂದ 12 ರ ದಾಖಲೆಗಳನ್ನು ತೆಗೆಸಿರುತ್ತೇನೆ ಎಂದರೆ ಸರಿ.

ದಾವಾಸ್ತಿ ಪ್ರಸ್ತುತ ಬೆಲೆ ಬಾಳುವ ಜಮೀನಾದ ಕಾರಣ 2 ಮತ್ತು 3 ನೇ ವಾದಿಯ ಚಿತಾವಣೆ ಮೇರೆಗೆ ಈ ದಾವೆ ಹೂಡಿದ್ದೆನೆ ಎಂದರೆ ಸರಿಯಲ್ಲ. ಸದರಿ ದಾವಾಸ್ತಿಯನ್ನು ಯಾರು ಖರೀದಿ ಮಾಡಿರುತ್ತಾರೆ ಎಂದು ದಾವಾ ಹೂಡುವ ಸಮಯಕ್ಕೆ ನನಗೆ ಗೊತ್ತಾಗಿರುತ್ತದೆ. ಹಾಗಾಗಿ ನಾನು ದಾವಾಸ್ತಿಯ ಮೇಲೆ ನ್ಯಾಯಾಲಯದ ಶುಲ್ಕವನ್ನು ಪಾವತಿಸಿಲ್ಲ ಎಂದರೆ ಸರಿ. (ಸದರಿ ಪ್ರಶ್ನೆ ಕಾನೂನಿನ ಪ್ರಶ್ನೆಯಾದ ಕಾರಣ ಸದರಿ ಪ್ರಶ್ನೆಗೆ ಉತ್ತರಿಸಲು ಸಾಕ್ಷಿಗೆ ವಿನಾಯತಿಯನ್ನು ನೀಡಲಾಯಿತು).

ದಾವೆ ಹೂಡುವ ಸಮಯಕ್ಕೆ ದಾವಾಸ್ತಿಯ ಮೌಲ್ಯ ರೂ.13,88,000/- ವಿದ್ದ ಕಾರಣ ಈ ದಾವೆಯನ್ನು ಈ ನ್ಯಾಯಾಲಯದಲ್ಲಿಹೂಡಲುಅಧಿಕಾರ ವ್ಯಾಪ್ತಿ ಇಲ್ಲ ಎಂದರೆ (ಸದರಿ ಪ್ರಶ್ನೆ ಕಾನೂನಿನ ಪ್ರಶ್ನೆಯಾದ ಕಾರಣ ಸದರಿ ಪ್ರಶ್ನೆಗೆ ಉತ್ತರಿಸಲು ಸಾಕ್ಷಿಗೆ ವಿನಾಯತಿಯನ್ನು ನೀಡಲಾಯಿತು).

ಸದರಿ ಕ್ರಯಪತ್ರದ ರದ್ದತಿಗಾಗಿ ಕೇಳದೆ ದಾವಾಸ್ತಿಯಲ್ಲಿನಮಗೆ ಯಾವುದೇಹಕ್ಕು ಇಲ್ಲದೆ ಇದ್ದರು ಸಹ ಈ ದಾವೆ ಹೂಡಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.